**Akashvani : Bangalore**
**National Bulletin In Kannada**
**13.04.2025 / 7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**13.04.2025 / 7.35 am**

**<><*<><>*><>**

ಮುಖ್ಯಾಂಶಗಳು

೧. ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ನಾಳೆ ಪ್ರಧಾನಿ ಹರಿಯಾಣ ಪ್ರವಾಸ, ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ

೨. ಪಶ್ಚಿಮ ಬಂಗಾಳ ಹಿಂಸಾಚಾರ; ಕೇಂದ್ರ ಪಡೆಗಳ ನಿಯೋಜನೆಗೆ ಆದೇಶಿಸಿದ ಕೋಲ್ಕತ್ತಾ ಹೈಕೋರ್ಟ್

೩. ವೈಶಾಖ ಮಾಸದ ಪ್ರಥಮ ದಿನವಾದ ಇಂದು ದೇಶದ ವಿವಿಧ ಭಾಗಗಳಲ್ಲಿ ಸುಗ್ಗಿ ಹಬ್ಬದ ಸಂಭ್ರಮ; ರಾಷ್ಟ್ರಪತಿಯವರಿಂದ ಶುಭಾಶಯ

೪. ಆರ್ಚರಿ ವಿಶ್ವಕಪ್; ಮಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತಕ್ಕೆ ಸ್ವರ್ಣ ಪದಕ

೫. ಐಪಿಎಲ್ ಟಿ-೨೦ ಕ್ರಿಕೆಟ್; ಪಂಜಾಬ್ ಕಿಂಗ್ಸ್ ವಿರುದ್ಧ ಸನ್ ರೈಸರ್ಸ್ ಹೈದರಾಬಾದ್‌ಗೆ ೮ ವಿಕೆಟ್‌ಗಳ ಜಯ

**<><*<><>*><>**

ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ನಾಳೆ ಪ್ರಧಾನಿ ನರೇಂದ್ರ ಮೋದಿ ಹರಿಯಾಣಕ್ಕೆ ಭೇಟಿ ನೀಡಲಿದ್ದಾರೆ. ನಾಳೆ ಬೆಳಿಗ್ಗೆ ಹಿಸಾರ್‌ಗೆ ಪ್ರಯಾಣ ಬೆಳೆಸಿ ಅಲ್ಲಿ, ಹಿಸಾರ್‌ನಿಂದ ಅಯೋಧ್ಯೆಗೆ ಸಂಪರ್ಕ ಒದಗಿಸುವ ವಾಣಿಜ್ಯ ವಿಮಾನಕ್ಕೆ ಚಾಲನೆ ನೀಡಲಿದ್ದಾರೆ. ಇದರ ಜೊತೆಗೆ ಅವರು, ಹಿಸಾರ್ ವಿಮಾನ ನಿಲ್ದಾಣದ ಹೊಸ ಟರ್ಮಿನಲ್ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಬಳಿಕ ಪ್ರಧಾನಿ, ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ಭೇಟಿಯ ಭಾಗವಾಗಿ ಪ್ರಧಾನಿ ಯಮುನಾನಗರದಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಆ ಪ್ರದೇಶದ ವಿದ್ಯುತ್ ಮೂಲಸೌಕರ್ಯ ಉತ್ತೇಜಿಸುವ ಸಲುವಾಗಿ, ಪ್ರಧಾನಿ, ಯಮುನಾನಗರದಲ್ಲಿ ದೀನಬಂಧು ಛೋಟು ರಾಮ್ ಉಷ್ಣ ವಿದ್ಯುತ್ ಸ್ಥಾವರದ ೮೦೦ ಮೆಗಾವ್ಯಾಟ್ ಆಧುನಿಕ ಉಷ್ಣ ವಿದ್ಯುತ್ ಘಟಕಕ್ಕೆ ಶಿಲಾನ್ಯಾಸ ನೆರವೇರಿಸಲಿದ್ದಾರೆ. ೨೩೩ ಎಕರೆಗಳಲ್ಲಿ ವ್ಯಾಪಿಸಿರುವ, ಸುಮಾರು ೮ ಸಾವಿರದ ೪೭೦ ಕೋಟಿ ರೂಪಾಯಿ ಮೌಲ್ಯದ ಈ ಘಟಕ, ಹರಿಯಾಣದ ಇಂಧನ ಸ್ವಾವಲಂಬನೆಯನ್ನು ಗಮನಾರ್ಹವಾಗಿ

ಹೆಚ್ಚಿಸಲಿದೆ ಮತ್ತು ರಾಜ್ಯಾದ್ಯಂತ ನಿರಂತರ ವಿದ್ಯುತ್ ಪೂರೈಕೆಯನ್ನು ಖಚಿತಪಡಿಸಲಿದೆ. ಕೇಂದ್ರ ಸರ್ಕಾರದ ಗೋಬರ್ಧನ್ ಯೋಜನೆಯ ಭಾಗವಾಗಿ ಪ್ರಧಾನಮಂತ್ರಿಗಳು ಯಮುನಾನಗರದ ಮುಕರಬ್‌ಪುರದಲ್ಲಿ ಜೈವಿಕ ಅನಿಲ ಸ್ಥಾವರಕ್ಕೆ ಶಿಲಾನ್ಯಾಸ ನೆರವೇರಿಸಲಿದ್ದಾರೆ. ಭಾರತ್ ಮಾಲಾ ಪರಿಯೋಜನೆಯಡಿಯಲ್ಲಿ ಸುಮಾರು ೧ ಸಾವಿರದ ೭೦ ಕೋಟಿ ರೂಪಾಯಿ ಮೌಲ್ಯದ ೧೪.೪ ಕಿಲೋಮೀಟರ್ ರೇವಾರಿ ಬೈಪಾಸ್ ಯೋಜನೆಯನ್ನು ಪ್ರಧಾನಿ ಉದ್ಘಾಟಿಸಲಿದ್ದಾರೆ. ಇದು ರೇವಾರಿ ನಗರದ ಜನದಟ್ಟಣೆ ಸಮಸ್ಯೆಗೆ ಪರಿಹಾರ ಒದಗಿಸಲಿದ್ದು, ದೆಹಲಿ-ನಾರ್ನಾಲ್ ಪ್ರಯಾಣದ ಸಮಯವನ್ನು ಸುಮಾರು ಒಂದು ಗಂಟೆ ಕಡಿಮೆ ಮಾಡುತ್ತದೆ. ಆ ಮೂಲಕ ಈ ಪ್ರದೇಶದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಯನ್ನು ಹೆಚ್ಚಿಸಲಿದೆ.

<><*<><>*><>

ವಕ್ಫ್ ತಿದ್ದುಪಡಿ ಕಾಯ್ದೆ -೨೦೨೫ರ ವಿರುದ್ಧ ವ್ಯಾಪಕ ಹಿಂಸಾಚಾರ, ವಿಧ್ವಂಸಕ ಕೃತ್ಯಗಳು ನಡೆದ ಬೆನ್ನಲ್ಲೆ ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯಲ್ಲಿ ಕೇಂದ್ರೀಯ ಪಡೆಗಳನ್ನು ತಕ್ಷಣ ನಿಯೋಜಿಸುವಂತೆ ಕೋಲ್ಕತ್ತಾ ಹೈಕೋರ್ಟ್ ಆದೇಶಿಸಿದೆ. ರಾಜ್ಯದ ಹಲವು ಭಾಗಗಳಲ್ಲಿ ಅಶಾಂತಿಯ ವಾತಾವರಣವಿದೆ ಎಂದು ಆರೋಪಿಸಿ ಪಶ್ಚಿಮ ಬಂಗಾಳದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಕೋಲ್ಕತ್ತಾ ಹೈಕೋರ್ಟ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯ ಬಳಿಕ ನ್ಯಾಯಮೂರ್ತಿಗಳಾದ ಸೌಮೆನ್ ಸೇನ್ ಮತ್ತು ರಾಜಬಸು ಚೌಧರಿ ಅವರಿದ್ದ ವಿಶೇಷ ಪೀಠ ಈ ಆದೇಶ ಹೊರಡಿಸಿದೆ. ಈ ಆದೇಶ ಕೇವಲ ಮುರ್ಷಿದಾಬಾದ್ ಜಿಲ್ಲೆಗೆ ಸೀಮಿತವಾಗಬಾರದು ಎಂದಿರುವ ನ್ಯಾಯಾಲಯ ಇದೇ ಪರಿಸ್ಥಿತಿ ಉದ್ಭವಿಸುವ ಇತರೆ ಜಿಲ್ಲೆಗಳಲ್ಲೂ ಪರಿಸ್ಥಿತಿ ನಿಯಂತ್ರಣಕ್ಕೆ ತಂದು ಸಾಮಾನ್ಯ ಸ್ಥಿತಿ ಪುನಸ್ಥಾಪಿಸಲು ಕೇಂದ್ರ ಪಡೆಗಳನ್ನು ನಿಯೋಜಿಸುವಂತೆ ಸೂಚಿಸಿದೆ.

ಮುರ್ಷಿದಾಬಾದ್‌ನಲ್ಲಿ ನಡೆದ ಹಿಂಸಾಚಾರದಲ್ಲಿ ಕನಿಷ್ಠ ಮೂರು ಮಂದಿ ಮೃತಪಟ್ಟಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ೧೩೮ ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಗಿದೆ.

<><*<><>*><>

೨೦೨೫ನೇ ಹಣಕಾಸು ವರ್ಷದಲ್ಲಿ ೭.೫ ಗಿಗಾವ್ಯಾಟ್ ಸಾಮರ್ಥ್ಯದ ದಾಖಲೆಯ ೬ ಜಲಶಕ್ತಿ ಪಂಪ್ಡ್ ಶೇಖರಣಾ ಯೋಜನೆಗಳಿಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ ಎಂದು ಕೇಂದ್ರ ವಿದ್ಯುತ್ ಸಚಿವಾಲಯ ತಿಳಿಸಿದೆ.

ಇಂಧನ ಸಂಗ್ರಹ ಪರಿಹಾರಗಳನ್ನು ಅಭಿವೃದ್ಧಿಪಡಿಸುವ ಭಾರತದ ನಿರಂತರ ಬದ್ಧತೆಯಲ್ಲಿ ಇದು ಪ್ರಮುಖ ಮೈಲಿಗಲ್ಲಾಗಿದೆ. ಈ ಯೋಜನೆಗಳಲ್ಲಿ ಖಾಸಗಿ ವಲಯದ ಭಾಗವಹಿಸುವಿಕೆ ಸಾಕಷ್ಟು ಉತ್ತೇಜನಕಾರಿಯಾಗಿದೆ ಎಂದು ತಿಳಿಸಿದೆ. ಕರ್ನಾಟಕದಲ್ಲಿ ಶರಾವತಿ ೨ ಸಾವಿರ ಮೆಗಾವ್ಯಾಟ್,

ಒಡಿಶಾದಲ್ಲಿ ಅಪ್ಪರ್ ಇಂದ್ರಾವತಿ ೬೦೦ ಮೆಗಾವ್ಯಾಟ್, ಮಹಾರಾಷ್ಟ್ರದಲ್ಲಿ ಭಿವ್‌ಪುರಿ ೧ ಸಾವಿರ ಮೆಗಾವ್ಯಾಟ್, ಭವಾಲಿ ೧ ಸಾವಿರದ ೫೦೦ ಮೆಗಾವ್ಯಾಟ್, ಮಧ್ಯಪ್ರದೇಶದಲ್ಲಿ ೧ ಸಾವಿರದ ೯೨೦ ಮೆಗಾವ್ಯಾಟ್ ಹಾಗೂ ಆಂಧ್ರಪ್ರದೇಶದಲ್ಲಿ ಚಿತ್ರಾವತಿ ೫೦೦ ಮೆಗಾವ್ಯಾಟ್ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.

<><*<><>*><>

ಪಂಜಾಬ್‌ನ ಜಲಂಧರ್‌ನಲ್ಲಿರುವ ವಜ್ರಾಕಾರ್ಪ್ಸ್ ಪಡೆಯ ಪ್ರಧಾನ ಕಚೇರಿಗೆ ನಿನ್ನೆ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಭೇಟಿ ನೀಡಿ, ಕಾರ್ಯಾಚರಣೆಯ ಸನ್ನದ್ಧತೆ ಕುರಿತಂತೆ ಪರಿಶೀಲನೆ ನಡೆಸಿದರು.

ಪಶ್ಚಿಮ ವಲಯದಲ್ಲಿ ಈಗಿರುವ ಭದ್ರತೆ ಹಾಗೂ ಕಾರ್ಯಾಚರಣೆಯ ಸನ್ನದ್ಧತೆಯ ಕುರಿತು ವಜ್ರಾಕಾರ್ಪ್ಸ್‌ನ ಸೇನಾಧಿಕಾರಿ ಅವರಿಂದ ಜನರಲ್ ಉಪೇಂದ್ರ ದ್ವಿವೇದಿ ಮಾಹಿತಿ ಪಡೆದರು.

<><*<><>*><>

ಅಂತಾರಾಷ್ಟ್ರೀಯ ಸಹಕಾರಿ ವರ್ಷದ ಅಂಗವಾಗಿ ಮಧ್ಯಪ್ರದೇಶದಲ್ಲಿಂದು ರಾಜ್ಯಮಟ್ಟದ ಸಹಕಾರಿ ಸಮ್ಮೇಳನ ಆಯೋಜಿಸಲಾಗಿದ್ದು, ಕೇಂದ್ರ ಗೃಹ ಹಾಗೂ ಸಹಕಾರ ಖಾತೆ ಸಚಿವ ಅಮಿತ್ ಶಾ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಭೋಪಾಲ್‌ನಲ್ಲಿ ರಾಜ್ಯ ಸರ್ಕಾರ ಆಯೋಜಿಸಿರುವ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಧ್ಯಪ್ರದೇಶ ಮುಖ್ಯಮಂತ್ರಿ ಡಾ.ಮೋಹನ್ ಯಾದವ್ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳಿ ಮತ್ತು ಮಧ್ಯಪ್ರದೇಶ ಡೈರಿ ಒಕ್ಕೂಟದ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಗುವ ನಿರೀಕ್ಷೆಯಿದೆ.

ಇದೇ ವೇಳೆ ಮೈಕ್ರೋ ಎಟಿಎಂ, ಕಿಸಾನ್ ಕ್ರೆಡಿಟ್ ಕಾರ್ಡ್ ಮತ್ತು ಅನುಮೋದಿತ ಸಾಲ ಪತ್ರಗಳನ್ನು ವಿತರಿಸಲಾಗುವುದು.

<><*<><>*><>

ಮುಂಬೈನಲ್ಲಿ ನಿನ್ನೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಗುಜರಾತಿ ವಾರಪತ್ರಿಕೆ ಚಿತ್ರಲೇಖಾದ ೭೫ನೇ ಸಂಸ್ಥಾಪನಾ ದಿನದ ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡರು. ಈ ವೇಳೆ ಮಾತನಾಡಿದ ಅವರು, ೭೫ ವರ್ಷಗಳ ಈ ವಾರಪತ್ರಿಕೆ ಪಯಣ ಗುಜರಾತಿ ಸಾಹಿತ್ಯ, ಸಮಾಜ, ಜೀವನಶೈಲಿ ಮತ್ತು ಗುಜರಾತ್ ಹಾಗೂ ದೇಶ ಎದುರಿಸಿದ ಸಮಸ್ಯೆಗಳಿಗೆ ಹಿಡಿದ ಕನ್ನಡಿಯಾಗಿದೆ. ಕಾರ್ಯಕ್ರಮದಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್, ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ ಪಾಲ್ಗೊಂಡಿದ್ದರು.

<><*<><>*><>

ಇಂದು ವೈಶಾಖ ಮಾಸದ ಪ್ರಥಮ ದಿನ. ದೇಶದ ವಿವಿಧ ಭಾಗಗಳಲ್ಲಿ ಸುಗ್ಗಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಪಂಜಾಬ್ ನಲ್ಲಿ ಬೈಸಾಖಿ ಎಂದು ಆಚರಿಸಲಾಗುವ ಸುಗ್ಗಿ ಹಬ್ಬಕ್ಕೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಇತಿಹಾಸವಿದೆ. ಸಿಖ್‌ರ ೧೦ ನೇ ಗುರು ಗುರು ಗೋವಿಂದ್ ಸಿಂಗ್ ಅವರು ಖಾಲ್ಸಾ ಪಂಥವನ್ನು ಆರಂಭಿಸಿದ ಶುಭದಿನ ಇದಾಗಿದೆ. ಈ ನಿಮಿತ್ತ ಅಮೃತಸರದ ಗುರುದ್ವಾರದಲ್ಲಿ ಇಂದು ಬೆಳಿಗ್ಗಿನಿಂದಲೇ ದೇಶದ ವಿವಿಧೆಡೆ ಮತ್ತು ವಿದೇಶಗಳಿಂದ ಆಗಮಿಸಿದ ಸಿಖ್ ಬಂಧುಗಳು ವಿಶೇಷ ಪೂಜೆ ಮತ್ತು ಗುರುಬಾಣಿ ಪಠಣದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಕೇರಳದಲ್ಲಿ ನವವರ್ಷ ವಿಷು ಸಂಭ್ರಮ ಕಳೆಕಟ್ಟಿದೆ. ಪಶ್ಚಿಮ ಬಂಗಾಳದಲ್ಲಿ ಪೊಹಿಲಾ ಬೊಯಿಸಾಖ್, ತಮಿಳುನಾಡಿನಲ್ಲಿ ಪುತಾಂಡು ಪಿರಾಪು, ಅಸ್ಸಾಂನಲ್ಲಿ ಬೊಹಾಲಿ ಬಿಹು ಅಥವಾ ರೊಂಗಾಲಿ ಬಿಹು ಹೀಗೆ ವಿವಿಧ ರಾಜ್ಯಗಳಲ್ಲಿ ವಿವಿಧ ಹೆಸರುಗಳಿಂದ ಸುಗ್ಗಿ ಹಬ್ಬವನ್ನು ಆಚರಿಸಲಾಗುತ್ತಿದೆ. ನಾಡಿನ ಸಮಸ್ತ ಜನತೆಗೆ ಶುಭ ಹಾರೈಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಈ ಹಬ್ಬಗಳು ರಾಷ್ಟ್ರದ ಅಭಿವೃದ್ಧಿ ಕಡೆಗೆ ಬದ್ಧತೆ ಮತ್ತು ಸಮರ್ಪಣಾ ಭಾವದೊಂದಿಗೆ ಕೆಲಸ ಮಾಡಲು ಜನರಲ್ಲಿ ಪ್ರೇರಣೆ ತುಂಬಲಿ ಎಂದು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

<><*<><>*><>

ಅಮೆರಿಕ, ಪ್ರಪಂಚದಾದ್ಯಂತದ ದೇಶಗಳ ಮೇಲೆ ಪರಸ್ಪರ ಸುಂಕವನ್ನು ವಿಧಿಸುವುದಾಗಿ ಘೋಷಿಸಿದ ಬೆನ್ನಲ್ಲೇ ದೇಶದ-ವಿದೇಶಿ ವಿನಿಮಯ ಸಂಗ್ರಹ ೧೦.೮೭ ಬಿಲಿಯನ್ ಡಾಲರ್‌ಗಳಷ್ಟು ಹೆಚ್ಚಾಗಿದ್ದು, ೬೭೬.೨೭ ಬಿಲಿಯನ್ ಡಾಲರ್‌ಗಳಿಗೆ ತಲುಪಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಈ ಘೋಷಣೆಯ ಪರಿಣಾಮ ಪ್ರಪಂಚದಾದ್ಯಂತದ ಷೇರು ಮಾರುಕಟ್ಟೆಗಳಲ್ಲಿ ತಲ್ಲಣ ಸೃಷ್ಟಿಯಾಗಿದ್ದು, ಇದರ ಪರಿಣಾಮ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಕೂಡ ದುರ್ಬಲಗೊಳ್ಳಲು ಆರಂಭಿಸಿದೆ. ಈ ಹಿನ್ನೆಲೆಯಲ್ಲಿ ಭಾರತದಲ್ಲಿ ವಿದೇಶಿ ಹೂಡಿಕೆದಾರರ ಒಳಹರಿವು ಹೆಚ್ಚಾಗಿದೆ.

<><*<><>*><>

ಅಮೇರಿಕದ ಫ್ಲೋರಿಡಾದಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವ ಕಪ್ ಪಂದ್ಯಾವಳಿಯ ಪ್ರಥಮ ಹಂತದಲ್ಲಿ ಭಾರತದ ಜ್ಯೋತಿ ಸುರೇಖಾ ವೆನ್ನಮ್ ಮತ್ತು ರಿಷಬ್ ಯಾದವ್ ಜೋಡಿ ಮಿಶ್ರ ತಂಡ ವಿಭಾಗದಲ್ಲಿ ಚಿನ್ನದ ಪದಕ ಗಳಿಸಿದ್ದಾರೆ. ಚೀನಾ ತೈಪೆಯ ಹುವಾಣಗ್ ಐ ಜೌ ಮತ್ತು ಚೆನ್ ಚಿ ಲನ್ ಅವರ ವಿರುದ್ಧ ೧೫೩-೧೫೧ ರ ಅಂತರದಲ್ಲಿ ಮಣಿಸಿ, ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ. ರಿಷಬ್ ಅವರ ಪ್ರಥಮ ಚಿನ್ನದ ಪದಕ ಇದಾದರೆ ಜ್ಯೋತಿಯವರ ೧೧ ನೇ ಚಿನ್ನದ ಪದಕ ಇದಾಗಿದೆ. ಅಲ್ಲದೆ ಆರ್ಚರಿ ಮಿಶ್ರ ಡಬ್ಬಲ್ಸ್ ವಿಭಾಗವನ್ನು ಒಲಿಂಪಿಕ್ ಪಂದ್ಯಾವಳಿಗೆ ಸೇರ್ಪಡೆಗೊಳಿಸಿದ

ನಂತರ ಚಿನ್ನದ ಪದಕ ಗೆದ್ದ ಪ್ರಥಮ ಜೋಡಿ ಇದಾಗಿದೆ. ಅಂತಾರಾಷ್ಟ್ರೀಯ ಒಲಿಂಪಿಕ್ ಮಂಡಳಿ ಇತ್ತೀಚೆಗೆ ೨೦೨೮ ರ ಲಾಸ್ ಎಂಜಲೀಸ್ ಒಲಿಂಪಿಕ್ಸ್‌ಗೆ ಈ ವಿಭಾಗವನ್ನು ಸೇರ್ಪಡೆಗೊಳಿಸಿತ್ತು.

<><*<><>*><>

ಹೈದರಾಬಾದ್‌ನ ರಾಜೀವ್ ಗಾಂಧಿ ಅಂತರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಕಳೆದ ರಾತ್ರಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್- ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡದ ವಿರುದ್ಧ ಸನ್‌ರೈಸರ್ಸ್ ಹೈದರಾಬಾದ್ ೮ ವಿಕೆಟ್ ಭರ್ಜರಿ ಗೆಲುವು ಸಾಧಿಸಿದೆ. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ನಿಗದಿತ ೨೦ ಓವರ್‌ಗಳಲ್ಲಿ ೬ ವಿಕೆಟ್ ನಷ್ಟಕ್ಕೆ ೨೪೫ ರನ್ ಗಳಿಸಿತು. ಗೆಲುವಿನ ಬೃಹತ್ ಮೊತ್ತ ಬೆನ್ನತ್ತಿದ ಸನ್ ರೈಸರ್ಸ್ ಹೈದರಾಬಾದ್ ತಂಡ ೧೮.೩ ಓವರ್ ಕೇವಲ ೨ ವಿಕೆಟ್ ನಷ್ಟಕ್ಕೆ ೨೪೭ ರನ್‌ಗಳಿಸಿ ಗೆಲುವಿನ ನಗೆ ಬೀರಿತು.

<><*<><>*><>

೨೦೨೫ ರ ಮಹಿಳಾ ಕಬಡ್ಡಿ ವಿಶ್ವಕಪ್ ಅನ್ನು ಬಿಹಾರ ಆತಿಥ್ಯ ವಹಿಸಲಿದ್ದು, ರಾಜ್‌ಗೀರ್‌ನಲ್ಲಿ ಜೂನ್ ೧ ರಿಂದ ಜೂನ್ ೧೦ ರವರೆಗೆ ನಡೆಯಲಿದೆ. ಭಾರತದ ಜೊತೆಗೆ ಇರಾನ್, ಬಾಂಗ್ಲಾದೇಶ, ನೆದರ್‌ಲ್ಯಾಂಡ್ಸ್, ಜಪಾನ್, ಪೋಲೆಂಡ್, ಉಗಾಂಡಾ, ಕೀನ್ಯಾ, ಹಂಗೇರಿ, ಥೈಲ್ಯಾಂಡ್, ನೇಪಾಳ, ಜರ್ಮನಿ ಮತ್ತು ಅರ್ಜೆಂಟೀನಾ ಸೇರಿದಂತೆ ೧೪ ತಂಡಗಳು ಮಹಿಳಾ ಕಬ್ಬಡ್ಡಿ ವಿಶ್ವಕಪ್‌ನಲ್ಲಿ ಸ್ಪರ್ಧಿಸುತ್ತಿವೆ. ನಿನ್ನೆ ಈ ಕುರಿತಂತೆ ಪಾಟ್ನಾದ ಪಾಟಲಿಪುತ್ರ ಕ್ರೀಡಾ ಸಂಕೀರ್ಣದಲ್ಲಿ ಭಾರತೀಯ ಹವ್ಯಾಸಿ ಕಬಡ್ಡಿ ಫೆಡರೇಶನ್-ಎಕೆಎಫ್‌ಐ ಮತ್ತು ಬಿಹಾರ ರಾಜ್ಯ ಕ್ರೀಡಾ ಪ್ರಾಧಿಕಾರ -ಬಿಎಸ್‌ಎಸ್‌ಎ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಎಕೆಎಫ್‌ಐ ಪರವಾಗಿ ಪ್ರಧಾನ ಕಾರ್ಯದರ್ಶಿ ಜಿತೇಂದ್ರ ಪ್ರಾಣ್ ಸಿಂಗ್ ಠಾಕೂರ್ ಮತ್ತು ಬಿಎಸ್‌ಎಸ್‌ಎ ಮಹಾನಿರ್ದೇಶಕ ರವೀಂದ್ರನ್ ಶಂಕರನ್ ಒಪ್ಪಂದಕ್ಕೆ ಸಹಿ ಹಾಕಿದರು.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>